# ಆರು ಅಕ್ಷರವುಳ್ಳ ವ್ಯಾಹೃತಿಯಿಂದ

1. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 05.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 660.
3. **Ref.**: Hare Srinivasa, Taratamyokta Bhajana Samagra Sangraha Vol-2, by Dr. Purnabodha Vadirajacharya Kadagadakai, Belagavi, page No. 241.
4. **Note:** Lyrics given here are as per Ref. 1. The wordings in Ref. 2 and Ref. 3 are similar to Ref. 1 except few differences which are not considered here.

ಆರು ಅಕ್ಷರವುಳ್ಳ ವ್ಯಾಹೃತಿಯಿಂದ ಓಂಕಾರವಾಗುವುದು ಕೇಳಿ

ಈ ರೀತಿ ಇಪ್ಪತ್ತು ನಾಲ್ಕು ಅಕ್ಷರಗಳಿಂದ

ತೋರುತಲಿ ಗಾಯತ್ರಿಯ ರಚಿಸಿದ ಹರಿಯು

ಮೆರೆವುವೈ ಪುರುಷ ಸೂಕ್ತಾದಿ ಅನಂತ ವೇದ ರಾಶಿ

ದೊರೆ ಎಂದು ಪೊಗಳುವ ಓಂಕಾರ ಶ್ರೀಕಾರ

ಮೆರೆವುವೈ ಅಯ್ವತ್ತೊಂದು ಅಕ್ಷರಗಳು

ಈ ರೀತಿ ಅಶೇಷ ಗುಣಾಧಾರಯೆಂದು

ನಾರಾಯಣೋಥ ಪೂರ್ಣ ಗುಣಯುತ

ಭರದಿ ಜ್ಞಾನ ರೂಪ ಶಬ್ದನೊ

ಮೆರೆವ ದೇವೇಶ ಪ್ರತರ್ದನ ಧರಿಸಿದೆ

ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವ್ಯಾಹೃತಿ =** ವ್ಯಾಹೃತಿಯು ೩, ೬, ೭ ಅಕ್ಷರಗಳಿಂದ ಆಗುವುದೆಂಬ ಪರಂಪರೆ ಇದೆ.

೧. (ಮೂರು ಅಕ್ಷರ) ಓಂ ಭೂಃ, ಭುವಃ ಸ್ವಃ (ಸ್ವಮ್)

೨. (ಏಳು ಅಕ್ಷರ) ಭೂ, ಭುವಸ್, ಸ್ವರ್, ಮಹಸ್, ಜನಸ್, ತಪಸ್, ಸತ್ಯಂ.

**ಆರು ಅಕ್ಷರವುಳ್ಳ ವ್ಯಾಹೃತಿ =** ಇದು ನಮಗೆ ದೊರೆತಿಲ್ಲ

**ಇಪ್ಪತ್ತುನಾಲ್ಕು ಅಕ್ಷರವುಳ್ಳ ಗಾಯತ್ರಿ =** ಗಾಯತ್ರಿ ಛಂದಸ್ಸಿನಲ್ಲಿ ೮ ಅಕ್ಷರವುಳ್ಳ ಮೂರು ಪಾದಗಳು

**"ತತ್ಸವಿತುರ್ವರೇಣ್ಯಮ ಭರ್ಗೋ ದೇವಸ್ಯ ಧೀಮಹಿ**
**ಧಿಯೋ ಯೋ ನಃ ಪ್ರಚೋದಯಾತ್"**

**ಪುರುಷ ಸೂಕ್ತ =** ಸಹಸ್ರ ಶೀರ್ಷಾ ಎಂಬ ಪದದಿಂದ ಶುರುವಾಗಿದೆ.  ಋಗ್ವೇದ ೧೦ನೆಯ ಮಂಡಲದ ಸೂಕ್ತ.

**ಅಶೇಷ ಗುಣಾಧಾರ =** ಸಕಲ ಗುಣ ಪರಿಪೂರ್ಣ (ಸಕಲ ಕಲ್ಯಾಣ ಗುಣೋಪೇತಂ ಬ್ರಹ್ಮ)

**ಪ್ರತರ್ದನ =** ನಾಶಕ (ವಿಷ್ಣು ಸಹಸ್ರ ನಾಮ) (ಪ್ರತರ್ದನನೆಂಬ ಹೆಸರು ಹೊಂದಿದವ)

**Classification:** Ugabhoga
**Ankita:** purandara vittala
**Location:** NA
**Category:** Sankeerna, Hari Sarvottama
**Group Words:** Krishna, akshara, gayatri, japa, veda, Ananta, om, guna, Narayana, Vishnu, jnana,
**Pravachana:** NA
**Explanation:** NA